## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಅಡಗೂರ್ ಹೆಚ್. ವಿಶ್ವನಾಥ್, ಇವರ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ : ಕಾವೇರಿ ನದಿ ನೀರಿನ ನ್ಯಾಯಮಂಡಳಿ ತೀರ್ಪಿನಿಂದ ಕರ್ನಾಟಕದ ಕಾವೇರಿ ನದಿ ಕೊಳ್ಳದ ಪ್ರದೇಶಗಳಲ್ಲಿ ಆಗಿರುವ / ಆಗುತ್ತಿರುವ ನೀರಿನ ಸಮಸ್ಯೆ, ಕಾವೇರಿ ಕೊಳ್ಳದ 8 ಜಿಲ್ಲೆಗಳ ಮೇಲೆ ಆಗಿರುವ ಅನಾಹುತ, ದುಸ್ಥಿತಿಗಳ ಕುರಿತು.**

*****

1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:05.02.2007ರ ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಆದೇಶವನ್ನು ಮಾರ್ಪಡಿಸಿ, ದಿನಾಂಕ:16.02.2018ರಂದು ತನ್ನ ತೀರ್ಪನ್ನು ನೀಡಿದ್ದು, ಅದರನ್ವಯ ಕರ್ನಾಟಕ ರಾಜ್ಯದ ನೀರಿನ ಹಂಚಿಕೆಯನ್ನು 270 TMC ಯಿಂದ 284.75 TMC ಗೆ ಹೆಚ್ಚಿಸಲಾಯಿತು. ಈ ಹೆಚ್ಚುವರಿ 14.75 TMC ಯಲ್ಲಿ, 10 TMC ಯನ್ನು ಬರಪೀಡಿತ ಪ್ರದೇಶಗಳಿಗೂ ಮತ್ತು 4.75 TMC (Consumptive use) ನೀರನ್ನು ಬೆಂಗಳೂರು ನಗರ ಸೇರಿದಂತೆ ಕುಡಿಯುವ ಹಾಗೂ ಗೃಹೋಪಯೋಗಿ ಉದ್ದೇಶಕ್ಕಾಗಿ ನೀಡಲಾಗಿದೆ. ಸಾಮಾನ್ಯ ಜಲ ವರ್ಷದಲ್ಲಿ ಕರ್ನಾಟಕವು ಬಿಳಿಗುಂಡ್ಲುವಿನಲ್ಲಿ 177.25 TMC ನೀರನ್ನು ವಾರ್ಷಿಕವಾಗಿ ತಮಿಳುನಾಡು ರಾಜ್ಯಕ್ಕೆ ಹರಿಸಬೇಕಾಗಿರುತ್ತದೆ.

2. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:18.05.2018ರಂದು ನೀಡಿದ ಆದೇಶದ ಮೇರೆಗೆ ಭಾರತ ಸರ್ಕಾರವು ದಿನಾಂಕ:01.06.2018ರಂದು ಕಾವೇರಿ ನ್ಯಾಯಾಧಿಕರಣದ ಆದೇಶವನ್ನು ಅನುಷ್ಠಾನಗೊಳಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (Cauvery Water Management Authority- CWMA) ಮತ್ತು ಕಾವೇರಿ ನೀರು ನಿಯಂತ್ರಣಾ ಸಮಿತಿಯನ್ನು (Cauvery Water Regulation Committee- CWRC) ರಚಿಸಿ ಗೆಜೆಟ್‌ನಲ್ಲಿ ಪ್ರಕಟಿಸಿತು. ಇದುವರೆಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (CWMA) 31 ಸಭೆಗಳನ್ನು ಮತ್ತು ಕಾವೇರಿ ನೀರು ನಿಯಂತ್ರಣಾ ಸಮಿತಿಯ (CWRC) 99 ಸಭೆಗಳನ್ನು ಜರುಗಿಸಿರುತ್ತವೆ.

3. ರಾಜ್ಯಕ್ಕೆ ಹಂಚಿಕೆಯಾಗಿರುವ ಒಟ್ಟಾರೆ 284.75 TMC ನೀರಿನ ಬಳಕೆಗೆ ಈಗಾಗಲೇ ಹಲವಾರು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದ್ದು ನೀರಾವರಿ ಸೌಲಭ್ಯವನ್ನು ಕಲ್ಪಿಸುವುದರ ಜೊತೆಗೆ ಬೆಂಗಳೂರು ಮಹಾನಗರ ಸೇರಿದಂತೆ ಕಾವೇರಿ ಕಣಿವೆ ಪ್ರದೇಶಗಳಿಗೆ ಆದ್ಯತೆ ಮೇಲೆ ಅಗತ್ಯವಿರುವ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

4. ಕಳೆದ ಜಲ ವರ್ಷ 2023-24 ಸಂಕಷ್ಟ ವರ್ಷ (Distress Year) ವಾಗಿದ್ದು ರಾಜ್ಯದ ಜಲಾಶಯಗಳಿಗೆ ಸಾಮಾನ್ಯ ವರ್ಷದಲ್ಲಿ (Normal Year) ಬರಬೇಕಾಗಿದ್ದ ನೀರಿನ ಒಳಹರಿವಿನ ಪ್ರಮಾಣದಲ್ಲಿ ಗಣನೀಯ ಕೊರತೆ ಆಗಿರುತ್ತದೆ. ಆದಾಗ್ಯೂ ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರಿನ ಕೊರತೆಯಾಗದಂತೆ ಮತ್ತು ಕುಡಿಯು ನೀರಿನ ಪೂರೈಕೆಗೆ ಯಾವುದೇ ತೊಂದರೆಯಾಗದಂತೆ ನೀರಿನ ನಿರ್ವಹಣೆಯನ್ನು ಮಾಡಲಾಗಿದೆ.

5. ಪ್ರಸಕ್ತ ಜಲ ವರ್ಷ 2024-25 ರಲ್ಲಿ ಇದುವರೆಗೂ, ಕಳೆದ ವರ್ಷದ ನೀರಿನ ಒಳಹರಿವಿನ ಪ್ರಮಾಣಕ್ಕೆ ಹೋಲಿಸಿದಲ್ಲಿ ನೀರಿನ ಒಳಹರಿವು ಉತ್ತಮವಾಗಿದ್ದರೂ ಸಹ 30 ವರ್ಷಗಳ ಸರಾಸರಿಗೆ ಎದುರಾಗಿ ಸುಮಾರು ಶೇ.30ರಷ್ಟು ಕೊರತೆ ಇರುತ್ತದೆ. ಜೊತೆಗೆ ಕಾವೇರಿ ನ್ಯಾಯಾಧಿಕರಣದ ಆದೇಶಾನುಸಾರ

ತಮಿಳುನಾಡು ರಾಜ್ಯಕ್ಕೆ ಬಿಳಿಗುಂಡ್ಲುವಿನಲ್ಲಿ ನೀರು ಹರಿಸುವ ಬಗ್ಗೆ ಕಾವೇರಿ ನೀರು ನಿಯಂತ್ರಣಾ ಸಮಿತಿಯ (CWRC) ದಿನಾಂಕ:11.07.2024 ರ ನಿರ್ಣಯದ ಕುರಿತು ರಾಜ್ಯವು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಕಾನೂನು ಹಾಗೂ ತಾಂತ್ರಿಕ ತಂಡದೊಂದಿಗೆ ಸಮಾಲೋಚಿಸಿ, ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ:14.07.2024 ರಂದು ಸರ್ವ ಪಕ್ಷಗಳ ಮಾನ್ಯ ಮುಖಂಡರು, ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಕಾವೇರಿ ಕಣಿವೆಯ ಮಾನ್ಯ ಸಂಸದರು ಮತ್ತು ಉಭಯ ಸದನಗಳ ಮಾನ್ಯ ಶಾಸಕರುಗಳೊಂದಿಗೆ ಸುದೀರ್ಘ ಚರ್ಚೆಯನ್ನು ನಡೆಸಿ ಅವರುಗಳ ಅಭಿಪ್ರಾಯ / ಸಲಹೆಗಳನ್ನು ಪಡೆದಿರುತ್ತಾರೆ. ಸದರಿ ಸಭೆಯಲ್ಲಿ ಚರ್ಚೆಯಾದಂತೆ CWRC ನಿರ್ಣಯದ ಮೇಲೆ CWMA ಗೆ Review Petition ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

6. ಕಾವೇರಿ ಕಣಿವೆಯ ರಾಜ್ಯದ ಜಿಲ್ಲೆಗಳ ಕುಡಿಯುವ ಹಾಗೂ ನೀರಾವರಿ ಉದ್ದೇಶಗಳಿಗೆ ಅಗತ್ಯವಿರುವ ನೀರನ್ನು ಜಲಾಶಯಗಳಲ್ಲಿ ಈಗ ಲಭ್ಯವಿರುವ ಹಾಗೂ ಮುಂಬರುವ ಮಾಹೆಗಳಲ್ಲಿ ಬರುವ ನೀರಿನ ಒಳಹರಿವಿನ ಪ್ರಮಾಣ ಪರಿಗಣಿಸಿ ರಾಜ್ಯದ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕೊಂಡು ಸಮರ್ಪಕ ನೀರಿನ ನಿರ್ವಹಣೆಯನ್ನು ಮಾಡಲು ಸರ್ಕಾರ ಬಧ್ವವಾಗಿದೆ.

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**